ಕಳುಹಿಸಿಕೊಟ್ಟಿದ್ದೇವೆ. ಇವತ್ತು ನಾವು ಯಾರೂ ಕೂಡ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುವಂತಿಲ್ಲ. ಇದರ ಬಗ್ಗೆ ಸರ್ಕಾರ ವಿಶೇಷವಾಗಿ ಕಾಳಜಿ ವಹಿಸಿ, ಮಾನ್ಯ ಮಂತ್ರಿಗಳು ಬಹುಶಃ ನಮ್ಮ ಗೋಳನ್ನು ನೀಗುತ್ತಾರೆಂದು ನಾನು ಭಾವಿಸಿದ್ದೇನೆ.

(2) ಹಾಸನದಲ್ಲಿ ಸೀಮೆ ಎಣ್ಣೆ ಅಭಾವದಿಂದ ಜನರಿಗೆ ತೊಂದರೆಯಾಗಿರುವ ಬಗ್ಗೆ.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಅಧ್ಯಕ್ಷರೆ, ಹಾಸನದಲ್ಲಿ ಸೀಮೆಎಣ್ಣೆಗೆ ತುಂಬಾ ಅಭಾವವಿದ್ದು ಜನರಿಗೆ ತೊಂದರೆಯಾಗಿರುವ ವಿಚಾರದಲ್ಲಿ ಮಾನ್ಯ ಆಹಾರ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

ಛೇರ್ಮನ್ : ಹನುಮೇಗೌಡರೆ, ನಿಮ್ಮ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳಿಂದ ನಾಳೆ ಸೋಮವಾರ ಉತ್ತರವನ್ನು ಕೊಡಿಸುತ್ತೇನೆ. ಅದುವರೆಗೂ ಇದನ್ನು ತಡೆ ಹಿಡಿದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ತಮಗೆ ಈಗಾಗಲೇ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೇನೆ. ಈ ಬೆಂಗಳೂರು ನಗರದಲ್ಲಿ ತಿರುವಳ್ಳವರ್ ಕವಿಯ ಪ್ರತಿಮೆಯನ್ನು ಸ್ಥಾಪಿಸುವುದಕ್ಕೆ ಹೊರಟಿದ್ದಾರೆ. ನಗರಸಭೆಯವರು ಕಾನೂನು ಪ್ರಕಾರ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿಲ್ಲ. ತಮಿಳ್ನಾಡಿನಲ್ಲಿ ನಮ್ಮ ಕರ್ನಾಟಕದ ಕವಿಗಳ ಪ್ರತಿಮೆ ಎಲ್ಲೂ ಇಲ್ಲ. ಆದರೆ ನಮ್ಮ ಕರ್ನಾಟಕದಲ್ಲಿ ತಮಿಳ್ನಾಡಿನ ಕವಿಗಳ ಪ್ರತಿಮೆಗಳನ್ನು ಹಾಕುವುದಕ್ಕೆ ಸರ್ಕಾರ ನಿರ್ಧಾರವನ್ನು ಕೈಗೊಂಡಿದೆ. ಆ ಸದನದಲ್ಲಿ ಈ ವಿಚಾರ ಚರ್ಚೆಯಾಗಿದೆ. ಇವತ್ತು ಅಲ್ಲಿ ಇದರ ಬಗ್ಗೆ ಉತ್ತರವನ್ನು ಹೇಳುತ್ತೇನೆಂದು ಹೇಳಿದ್ದಾರೆ. ಇದು ಬಹಳ ಗಂಭೀರವಾದ ಪ್ರಶ್ನೆ. ಸರ್ಕಾರ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕು. ಸರ್ಕಾರದಿಂದ ತಾವು ಒಂದು ಹೇಳಿಕೆಯನ್ನು ಕೊಡಿಸಬೇಕು..

ಛೇರ್ಮನ್ : ಇದು ಆದಮೇಲೆ..

ಶ್ರೀ ವಾಟಾಳ್ ನಾಗರಾಜ್ : ತಾವು ಸರ್ಕಾರದಿಂದ ಒಂದು ಹೇಳಿಕೆಯನ್ನು ಕೊಡಿಸಬೇಕು. ಇದರ ಬಗ್ಗೆ ಸರ್ಕಾರದ ನೀತಿ ಏನು? ಈ ಪ್ರತಿಮೆಗಳನ್ನು ಹಾಕಬೇಕಾದರೆ ಸರ್ಕಾರದ ನೀತಿ ಏನು ಎಂಬುದನ್ನು ಹೇಳಬೇಕು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ಸರ್ಕಾರದ ನೀತಿ ಏನು? ಯಾರೋ ಒಬ್ಬ ಕಾರ್ಪೊರೇಷನ್ ಅಧಿಕಾರಿ ಈ ರೀತಿ ಮಾಡಿರುವುದಕ್ಕೆ ಏನು ಕಾರಣ ಏನು ಉದ್ದೇಶವಿದೆ? ಸರ್ಕಾರ ಇದರ ಬಗ್ಗೆ ಹೇಳಬೇಕು..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇದು ಸರಿಯಲ್ಲ. ಈ ಬಗ್ಗೆ ನಮಗೆ ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

ಛೇರ್ಮನ್: ನಿಯಮ 334ರ ಕೆಳಗೆ ಮಾನ್ಯ ಸದಸ್ಯರಾದ ದಯಾನಂದರಾವ್‌ರವರು ಹೇಳಬೇಕು. ನಾನು ಅವರನ್ನು ಕರೆದಿದ್ದೇನೆ.

(ಗೊಂದಲ)

ಛೇರ್ಮನ್ : ದಯಾನಂದರಾವ್‌ರವರೇ ನೀವು...

ಶ್ರೀ ಆರ್. ದಯಾನಂದರಾವ್ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಿಕೊಂಡು ಅವರಿಂದ ತರಗತಿ ಶಿಕ್ಷಕರನ್ನಾಗಿ ಪರಿಗಣಿಸುತ್ತಿದ್ದಾರೆ. ಇದರಿಂದ ಶಾಲಾ ಮಕ್ಕಳಿಗೆ ಸರಿಯಾಗಿ ದೈಹಿಕ ಶಿಕ್ಷಣ ದೊರೆಯುತ್ತಿಲ್ಲ. ಆದ್ದರಿಂದ ದೈಹಿಕ ಶಿಕ್ಷಕರನ್ನು ಬೇರೆಯಾಗಿ ನೇಮಿಸಿ ದೈಹಿಕ ಶಿಕ್ಷಕರಾಗಿಯೇ ಪರಿಗಣಿಸಬೇಕೆ ಹೊರತು ಬೇರೆ ಯಾವ ಕೆಲಸವನ್ನೂ ಕೊಡಬಾರದು ಮತ್ತು ಕೊರತೆಯಿರುರ ದೈಹಿಕ ಶಿಕ್ಷಕರನ್ನು ನೇಮಿಸಲು ಮಂಜೂರಾತಿ ಮಾಡಿಸಿಕೊಡಬೇಕು. ಈ ಬಗ್ಗೆ ಮಾನ್ಯ ಶಿಕ್ಷಣ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ ; ಮಾನ್ಯ ಅಧ್ಯಕ್ಷರೆ, ತಿರುವಳ್ಳುವರ್‌ರವರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ ಸರ್ಕಾರದ ನೀತಿ ಏನು? ಈ ಪ್ರತಿಮೆಯನ್ನು ಸ್ಥಾಪಿಸಲು ಬೆಂಗಳೂರು ನಗರ ಸಭೆಯವರು ಯಾರು?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ನನಗೆ ಉತ್ತರ ಹೇಳಬೇಕು. ಆ ಸದನದಲ್ಲಿ ಈ ಬಗ್ಗೆ ಚರ್ಚೆಯಾಗಿದೆ. ನಿಮ್ಮ ಕಾಂಗ್ರೆಸ್ ಪಕ್ಷದ ಮುಖಂಡರುಗಳೇ ಇದು ಸರಿಯಲ್ಲ ಎಂದು ಹೇಳಿದ್ದಾರೆ...

ಛೇರ್ಮನ್ : ನಾನು ಮಾನ್ಯ ದಯಾನಂದರಾವ್‌ರವರನ್ನು ಕರೆದಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕಾಗೋಡು ತಿಮ್ಮಪ್ಪನವರೇ, ನಿಮ್ಮ ಕಾಂಗ್ರೆಸ್ ಮುಖಂಡರುಗಳೇ ಇದು ಸರಿಯಿಲ್ಲವೆಂದು ಹೇಳಿದ್ದಾರೆ. ಇಲ್ಲಿ ಸಂಬಂಧಪಟ್ಟ ಸಚಿವರು ಯಾರಿದ್ದಾರೋ ನಮಗೆ ಇನ್ನೂ ಅರ್ಥವಾಗುತ್ತಿಲ್ಲ. ಈ ಬಗ್ಗೆ ಸಂಬಂಧಪಟ್ಟ ಜವಾಬ್ದಾರಿ ಇರತಕ್ಕ ಸಚಿವರು ಯಾರಿದ್ದಾರೆ...

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನೀವು ಎಲ್ಲಿ ಹೋಗಿದ್ದೀರಿ...

ಶ್ರೀ ವಾಟಾಳ್ ನಾಗರಾಜ್ : ನಾವು ಇಲ್ಲೇ ಇದ್ದೇವೆ. ನಾವು ಇಲ್ಲೇ ಇದ್ದೇವೆ...

(ಗೊಂದಲ)

ಶ್ರೀ ಅಜೀಜ್ ಸೇಠ್ : ಮಾನ್ಯ ಹೆಚ್ ಯುಡಿ ಮಿನಿಸ್ಟರ್ ಬಂದ ಮೇಲೆ ಇದರ ಬಗ್ಗೆ ಒಂದು ಹೇಳಿಕೆ ನೀಡುತ್ತಾರೆ.

ನಿಯಮ 334ರ ಮೇರೆಗೆ

ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸುವ ವಿಚಾರ

ಛೇರ್ಮನ್ : ಮಾನ್ಯ ಆರ್. ದಯಾನಂದರಾರ್‌ರವರೇ ತಾವು 334ನೇ ನಿಯಮ ಮೇರೆಗೆ ಮಾತನಾಡಬಹುದು. ಮಾನ್ಯ ಸದಸ್ಯರನ್ನು ಕರೆದಿದ್ದೇನೆ. ದಯವಿಟ್ಟು ಎಲ್ಲ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಆರ್. ದಯಾನಂದರಾವ್ : ಮಾನ್ಯ ಅಧ್ಯಕ್ಷರೇ, ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಿಕೊಂಡು ಅವರನ್ನು ತರಗತಿ ಶಿಕ್ಷಕರನ್ನಾಗಿ ಪರಿಗಣಿಸುತ್ತಿದ್ದಾರೆ. ಇದರಿಂದ ಶಾಲಾ ಮಕ್ಕಳಿಗೆ ಸರಿಯಾಗಿ ದೈಹಿಕ ಶಿಕ್ಷಣ ದೊರೆಯುತ್ತಿಲ್ಲ